		Mangalore Dakshina Kannada	26.02 2.90	
	b) M/s Petronet M.H.B. Ltd.. No. 332, Bangalore - 52	Gurupura, Mogaru Village Mangalore Dakshina Kannada	0.40	
10	M/s T.B.P.C.L.	Tannir Bavi Mangalore Dakshina Kannada	32.16	
11	M/s. Nagarajuna Chemical and fertilisers Ltd..	Kulai Thokur Kenjar, Baikampady Mangalore Dakshina Kannada	598.32 207.72	
12	M/s Reliance Industries Ltd..	Someshwara Someshwara Village Mangalore Dakshina Kannada	1.21	

2698 (2461) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಕೈಮಗ್ಗ ಅಭಿವೃದ್ಧಿ ನಿಗಮ, ವಿದ್ಯುತ್ ಚಾಲಿತ ಮಗ್ಗಗಳ ಅಭಿವೃದ್ಧಿ ನಿಗಮ ಹಾಗೂ ಕಾವೇರಿ ಕೈಮಗ್ಗ ನಿಗಮಗಳನ್ನು ಏಕೀಕೃತಗೊಳಿಸಿ ಕರ್ನಾಟಕ ರಾಜ್ಯ ಜವಳಿ ನಿಗಮ ಎಂಬ ಒಂದೇ ಸಂಸ್ಥೆಯನ್ನು ಸ್ಥಾಪಿಸಿ ಬಲಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಇಲ್ಲವಾದಲ್ಲಿ ಈ ಕುರಿತು ಸರ್ಕಾರದ ನಿಲುವುಗಳೇನು;

ಇ) 3 ನಿಗಮಗಳನ್ನು ನಷ್ಟದಲ್ಲಿ ನಡೆಸುವ ನಿಗಮವನ್ನು ಮಾಡಿ ಅದಕ್ಕೆ ಸೂಕ್ತ ಸ್ಥಾನಮಾನ ನೀಡಿ ಜವಳಿ ಉದ್ಯಮವನ್ನು ಪ್ರೋತ್ಸಾಹಿಸುವ ಕುರಿತು ಸರ್ಕಾರ ಯೋಜನೆ ರೂಪಿಸಿ ಬಯಸುತ್ತದೆಯೇ;

ಈ) ಅಧಿಕ ಸಿಬ್ಬಂದಿ ವೆಚ್ಚ ಮತ್ತು ನಿರ್ವಹಣಾ ವೆಚ್ಚಗಳನ್ನು ಕಡಿಮೆಗೊಳಿಸಿ ಶಕ್ತಿಯುತವಾದ ಒಂದೇ ನಿಗಮದ ಮೂಲಕ ನೇಕಾರರಿಗೆ ಪುನರ್ ಜೀವನ ನೀಡಲು ಸರ್ಕಾರ ಮುಂದಾಗುವುದೇ?

ಶ್ರೀ ಹೆಚ್.ಸಿ. ಮಹದೇವಪ್ಪ (ಜವಳಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಪ್ರಸ್ತುತ ಸರ್ಕಾರವು ಸದರಿ ಸಂಸ್ಥೆಗಳನ್ನು ವಿಲೀನಗೊಳಿಸುವ ಉದ್ದೇಶ ಹೊಂದಿರುವುದಿಲ್ಲ.

ಇ) ಸದ್ಯಕ್ಕೆ ಸರ್ಕಾರ ಅಂತಹ ಯೋಜನೆ ಹೊಂದಿರುವುದಿಲ್ಲ.

ಈ) ಈಗಾಗಲೇ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಇಲ್ಲಿನ ಹೆಚ್ಚುವರಿ ಸಿಬ್ಬಂದಿಗೆ ಸ್ವಯಂ ನಿವೃತ್ತಿ ಸೌಲಭ್ಯ ನೀಡಲಾಗಿದೆ.

2699 (2755) ಶ್ರೀ ರಾಜೇಂದ್ರನ್ ಎಸ್. (ಕೆಜಿಎಫ್) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯಲ್ಲಿ ಬಾಕಿ ಇರುವ ಶಾಲಾ ಕಾಲೇಜಿನ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನದ ಎಷ್ಟು ಅರ್ಜಿಗಳು ಬಾಕಿ ಉಳಿದಿವೆ; ಹಾಗೂ ಅವು ಎಷ್ಟು ವರ್ಷದಿಂದ ಮಂಜೂರಾತಿಗಾಗಿ ಬಾಕಿ ಉಳಿದಿವೆ;

ಆ) ಬಾಕಿ ಉಳಿಸಲು ಕಾರಣವೇನು;

ಇ) ಮಂಜೂರಾತಿಗೆ ಬಾಕಿ ಇರುವ ಎಲ್ಲಾ ಅರ್ಜಿಯನ್ನು ಯಾವಾಗ ಇತ್ಯರ್ಥ ಗೊಳಿಸಲಾಗುವುದು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆ :–

ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮಂಜೂರು ಮಾಡಲಾಗುವ ವಿವಿಧ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಗಳು ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದ ಅರ್ಜಿಗಳು ಬಾಕಿ ಇರುವುದಿಲ್ಲ. 2004–05ನೇ ಸಾಲಿನಲ್ಲಿ ಮಂಜೂರಾತಿಗೊಳಿಸಿದ ಹಾಗೂ ಮಂಜೂರಾತಿಗೊಳಿಸಬೇಕಾದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಕಾರ್ಯಕ್ರಮದ ಹೆಸರು	ಒಟ್ಟು ಅರ್ಜಿಗಳು	ಮಂಜೂರಾತಿಗೆ ಬೇಕಾದ ಅನುದಾನ	ಈವರೆಗೂ ಮಂಜೂರಾದ ಅನುದಾನ	ಮಂಜೂರು ಮಾಡಬೇಕಾದ ಅರ್ಜಿಗಳು	ಬೇಕಾಗುವ ಅನುದಾನ
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಗಳು					
1	1 ರಿಂದ 5ನೇ ತರಗತಿ ವಿದ್ಯಾರ್ಥಿ ವೇತನ	123641	92.73	30.02	8361	62.71
2	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 6 ರಿಂದ 10ನೇ ತರಗತಿ	41437	36.26	12.87	26729	23.39
3	ಪೌಢಶಾಲಾ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಶಿಷ್ಯ ವೇತನ ರೂ.500 ರಂತೆ	11317	56.58	44.20	2477	12.39
4	ಮಾಧ್ಯಮಿಕ ಶಾಲೆ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಶಿಷ್ಯ ವೇತನ ರೂ.250.00 ರಂತೆ	7960	19.90	14.00	2360	5.90
2	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳು					
1	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	11804	447.92	222.50	5422	225.42